ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಪ್ರೈವೇಟ್ ಲ್ಯಾಂಡ್ಸ್‌ನಲ್ಲಿರತಕ್ಕಂಥವರನ್ನು ಎಬ್ಬಿಸ ಬೇಕಾದರೆ ಅಜ್ಜಕ್ಷನ್ ಕಾಲ್‌ಫರ್ ಮಾಡಿ ನೋಟಿಫೈ ಮಾಡಿ ಅನಂತರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇವೆಲ್ಲ ಅನೇಕ ತೊಂದರೆಗಳು ಇರುತ್ತದೆ. ಪ್ರೈವೇಟ್ ಸ್ಲಮ್ಸ್‌ನಲ್ಲಿರತಕ್ಕಂಥವರಿಗೆ ಮುನಿಸಿಪಾಲಿಟಿಯಿಂದ ಭೂಮಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಿ. ಮಸಿಯಪ್ಪ.—ಇಲ್ಲಿಯವರೆಗೂ ಸಮ್ಸ್‌ನಲ್ಲಿರತಕ್ಕಂಥ ಜನರನ್ನು ಉಚ್ಚಾಟನೆ ಮಾಡುವುದು ಮತ್ತು ಅವರ ಗುಡಿಸಲುಗಳನ್ನು ನಾಶಮಾಡುವುದು ಇವೇ ಮುಂತಾದ ಕಾರ್ಯಗಳು ನಡೆಯುತ್ತಲೇ ಇರುತ್ತವೆ. ಇದನ್ನು ಮುಂದುವರಿಸುವುದಕ್ಕೆ ಅವಕಾಶಕೊಡದೆ. ಸ್ಲಮ್‌ನಲ್ಲಿರತಕ್ಕಂಥವರಿಗೆ ಬೇರೆ ಕಡೆ ಜಮೀನು ಕೊಡುವಂಥ ಒಂದುವ್ಯವಸ್ಥೆಯನ್ನು ಮಾಡುತ್ತೀರಾ ?.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತು ಸ್ಲಮ್ ಇರತಕ್ಕ ಪ್ರದೇಶಗಳು ಸರ್ಕಾರಿ ಜಮೀನು, ಪುರಸಭೆಯ ಜಮೀನು ಇದ್ದರೆ, ಖಾಸಗಿಯ ಪರ ಜಮೀನು ಇದ್ದರೆ, ಅದಕ್ಕೆ ಯಾವರೀತಿ ಕಾನೂನು ಮಾಡಬೇಕು, ಯಾವರೀತಿ ಆಕ್ಷನ್ ತೆಗೆದುಕೊಳ್ಳಬೇಕು ಆ ರೀತಿ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ವಿ. ಮಸಿಯಪ್ಪ.—ಆರನೆ ಐಟಮ್‌ನಲ್ಲಿ ನೆಹರೂ ನಗರದಲ್ಲಿ ಸೈಟ್ಸ್ ಮತ್ತು ಲೇ ಔಟ್ ಆಗಿದ್ದು ಸೈಟುಗಳನ್ನು ಜನರಿಗೆ ಕೊಡದೆ ಅನೇಕರಿಗೆ ಮನೆಗಳನ್ನು ಕಟ್ಟುವುದಕ್ಕೆ ಸಂಬಂಧಪಟ್ಟಂತೆ ಲೇ ಔಟ್ ಎಲ್ಲವನ್ನು ಕಟ್ಟಿಸಿಕೊಂಡು ಇನ್ನೂ ಅವರಿಗೆ ಸೈಟ್‌ಗಳನ್ನು ಕೊಟ್ಟಿಲ್ಲ. ಆ ಸ್ಥಳಗಳಲ್ಲಿ ಸೈಟ್‌ಗಳನ್ನು ತೆಗೆದುಕೊಂಡವರು ತುಂಬಾ ತೊಂದರೆಯನ್ನು ಪಡುತ್ತಿದ್ದಾರೆ. ಆದ್ದರಿಂದ ಇದನ್ನು ಸರಿಪಡಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಇದನ್ನು ಪರಿಶೀಲಿಸುತ್ತೇನೆ.

Electrification of Villages of Majali and Sadashivagad, Karwar.

827 SRI D. V. WAINGANKAR (Karwar).—Will the Minister of State for Information and Youth Services be pleased to state.—

(a) whether it is a fact that the village of Majali and Sadashivagad in Karwar Taluk are electrified by the State Electricity Board;

(b) if so, in which year;

(c) whether it is a fact that some hamlets in these villages *viz.*, Kothar, Shejebag, Gotnibag, Dendebag. Baval in Majali and Nakkud Mohalla in Sadashivagad are not electrified;

(d) whether it is a fact that the request for the electrification of these hamlets was made number of times;

(e) if so, the action taken by Government in the matter ?

SRI K. H. SRINIVASA.—(Minister for Information and Youth Services).—

(a) Yes.

(b) Majali village 1973
Sadashivagad 1967.

(c) Yes.

(d) Yes.

(c) Electrification of the above hamlets can be undertaken subject to availability of funds at the end of the 1976-81 Rural Electrifiation Corporation Scheme period.

ಶ್ರೀ ಡಿ. ವಿ. ವೈಗಾಂಕರ್.—ಮಜಲಿ ಎಂಬ ಗ್ರಾಮಂಕ್ಕೂ ಮತ್ತು ಸದಾಶಿವಗಡ ಎಂಬ ಗ್ರಾಮಂಕ್ಕೂ ವಿದ್ಯುತ್ತೀಕರಣಗೊಳಿಸಿರುವುದು ನಿಜವೇ ಎಂದು ಕೇಳಿರುವುದಕ್ಕೆ ೧೯೭೩ ನೇ ಇಸವಿಯಲ್ಲಿ ಮಜಲಿ ಗ್ರಾಮವನ್ನು ೧೯೭೭ ರಲ್ಲಿ ಸದಾಶಿವಗಡ್ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಬಗ್ಗೆ ಉತ್ತರವನ್ನು ಕೊಟ್ಟಿದ್ದೀರಿ. ನಮ್ಮಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಅದೇನೆಂದರೆ ಸಾಹುಕಾರನ ಹಿಂದೆ ಹೋಗುವುದು ಬೇಡ, ಬಡವನ ಮುಂದೆ ಹೋಗುವುದು ಬೇಡವೆಂದು ಹೇಳುತ್ತಾರೆ. ಅಂಥಾ ಪರಿಸ್ಥಿತಿ ನಮಗಾಗಿರುತ್ತದೆ. ನಾವು ಎಂ. ಎಲ್. ಎ. ಗಳಾಗಿ ಮತದಾರರ ಮುಂದೆ ಹೋಗದಂತಾಗಿರುತ್ತದೆ. ಇನ್ನು ಮುಂದಾದರೂ ಕೂಡ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಬಗ್ಗೆ ವ್ಯವಸ್ಥೆ ಮಾಡುತ್ತಿರಾ ಎಂದು ಕೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾವು ಆಶ್ವಾಸನೆಯನ್ನು ಕೊಡುವಂಥ ಪರಿಸ್ಥಿತಿಯಲ್ಲಿಲ್ಲವೆಂದು ಹೇಳುತ್ತೇನೆ.

1.30 P. M.

Stabbing of a person in Subramanyanagar, Bangalore

846 SRI MALLUR ANANDA RAO (Rajajinagar).—Will the Chief Minister be pleased to state.—

(a) whether it is a fact that rowdies stabbed the person at Sudramanyanagar and west of Chord Road and thereby one person is dead;

(b) if so, whether the Police have registered the case;

(c) whether it is also a fact that Police have failed to Protect the life of the people of the area ?

SRI B. SUBBAYYA SHETTY (Minister for Education) [on behalf of SRI D. DEVARAJ URS Chief) Minister].—

(a) One case of stabbing and two cases of assault have been reported to the Police, But no case of death is reported.

(b) Three cases have been registered in Rajajinagar Police Station.

(c) The Police have taken prompt action to protect the life of the people of the area whenever such cases are reported.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ರಾಜಾಜಿನಗರದ ಕ್ಷೇತ್ರದಲ್ಲಿ ರೌಡಿಗಳ ಹಾವಳಿ ದಿನನಿತ್ಯ ಆಗುತ್ತಾ ಇದೆ. ಬೆಂಗಳೂರಿನಲ್ಲಂತೂ ಇದು ಜಾಸ್ತಿಯಾಗಿದೆ, ಚೂರಿ ಹಾಕುವುದು ರೌಡಿತನ ಮಾಡುವುದು ದಿನನಿತ್ಯವೂ ಆಗುತ್ತಾ ಇದೆ. ಅದೇ ರೀತಿಯಾಗಿ ಸುಬ್ರಹ್ಮಣ್ಯನಗರದಲ್ಲೂ ಸಹ ಹಗಲಿನಲ್ಲೇ ಯಾರಿಗೆ ಬೇಕಾದರೂ ಚೂರಿ ಹಾಕುತ್ತಾರೆ. ಈ ಬಗ್ಗೆ ನಾನು ಪೋಲೀಸ್ ಅಧಿಕಾರಿಗಳಿಗೆ ಬರೆದಿದ್ದೇನೆ. ಕೆಲವು ಕೇಸಸ್‌ಗಳನ್ನು ಕೋಟ್ ಮಾಡಿ ಬರೆದಿದ್ದೇನೆ. ಇದರಿಂದ ಬೆಂಗಳೂರು ನಾಗರೀಕರಿಗೆ ತೊಂದರೆ ಇರುವುದರಿಂದ ಈ ನಾಗರೀಕರ ಒಂದು ರಕ್ಷಣೆಗೆ ಇದನ್ನು ನಿಲ್ಲಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?